ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ.324-2012
.......................... ವಿರುದ್ಧ ..........................

PW 01
CW 01

| | | |
|---|---|---|
| ಸಾಕ್ಷಿಯ ಹೆಸರು | ಃ | ಬ್ರಹ್ಮಾನಂದ |
| ತಂದೆಯ ಹೆಸರು | ಃ | ಗಣಪತಿ ಕಾಂಬಳೆ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ಆರ್.ಎಫ್.ಓ |
| ವಾಸ್ತವ್ಯ | ಃ | ಬೆಳಗಾವಿ |

ದಿನಾಂಕಃ 11-07-2022 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ನಾನು ದಿನಾಂಕಃ 17-11-2004 ರಿಂದ 16-09-2013 ರವರೆಗೆ ಗುಂದ ವಲಯದಲ್ಲಿ ವನ್ಯ ಪಾಲಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿನಾಂಕಃ 25-09-2010 ರಂದು ನನಗೆ ಬಂದ ಬಾತ್ಮಿ ಪ್ರಕಾರ ನಾನು, ಚಾಸಾ 2 ರಿಂದ ಚಾಸಾ 5 ಸಿಬ್ಬಂದಿಗಳನ್ನು ಹಾಗೂ ಪಂಚಾರಾದ ಚಾಸಾ 6 ಮತ್ತು 7 ರವರನ್ನು ಕರೆದುಕೊಂಡು ಗುಂದ ಗ್ರಾಮದ ಜನತಾ ಪ್ಲಾಟನಲ್ಲಿರುವ 5 ನೇ ಆರೋಪಿಯ ಮನೆಗೆ ಹೋಗಿ, ಅವರ ಮನೆಯಲ್ಲಿ ವಿಚಾರರಿಸಿದಾಗ ಆರೋಪಿಯ ಪತ್ನಿ ಆರೋಪಿಯು ಸ್ನಾನ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ನಂತರ ನಾವು ಮನೆಯನ್ನು ಸುತ್ತು ವರೆದಾಗ 5 ನೇ ಆರೋಪಿ ಪಾತ್ರೆಯ ಸಮೇತ ಓಡಿ ಹೋಗುತ್ತಿದ್ದವನು ನಮ್ಮನ್ನು ನೋಡಿ ಪಾತ್ರೆಯನ್ನು ಏಸೆದು ಓಡಿ ಹೋಗಿರುತ್ತಾನೆ. ನಂತರ ಸದ್ರಿ ಪಾತ್ರೆಯನ್ನು ಪರಿಶೀಲಿಸಿ ನೋಡಲಾಗಿ

ಅದರಲ್ಲಿ ಕುದಿಸಿದ ಹಸಿ ಮಾಂಸ ಇರುವುದು ಕಂಡು ಬಂದಿರುತ್ತದೆ. ನಂತರ ಸದ್ರಿ ಮಾಂಸವನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡು, ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಅರಗು ಮತ್ತು ಸೀಲ್‌ನ್ನು ಹಾಕಿರುತ್ತೇವೆ. ನಂತರ ಅವರ ಮನೆಯನ್ನು ಶೋಧನೆ ಮಾಡಿ ನೋಡಲಾಗಿ, ಒಂದು ಪಾತ್ರೆಯಲ್ಲಿ ಸಾಂಬಾರ ಮಾಡಿದ ಮಾಂಸ ಕಂಡ ಬಂದಿರುತ್ತದೆ. ಅದನ್ನು ಕೂಡ ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡು, ಅದನ್ನು ಪಾತ್ರೆಯ ಸಮೇತ ಮಾಂಸವನ್ನು ಬಿಳಿ ಬಟ್ಟೆಯಲ್ಲಿ ಕಟ್ಟಿ ಹಾಕಿ ಅರಗು ಮತ್ತು ಸೀಲ್‌ನ್ನು ಹಾಕಿರುತ್ತೇವೆ. ನಂತರ ಅಲ್ಲಿಂದ ಸಿಬ್ಬಂದಿ ಹಾಗೂ ಪಂಚರು ಸೇರಿಕೊಂಡು ಇಲಾಖೆ ವಾಹನ ಸಂಃ ಕೆಎ- 31- ಜಿ- 128 ರಲ್ಲಿ ನಂದಿಗದ್ದೆಯ 2 ನೇ ಆರೋಪಿತನ ಮನೆಗೆ ಹೋಗಿ ಅವರಿಗೆ ವಿಷಯವನ್ನು ತಿಳಿಸಿ ಮನೆಯನ್ನು ಶೋಧನೆ ಮಾಡುತ್ತಿರುವಾಗ ಯಾರೋ ಒಬ್ಬ ವ್ಯಕ್ತಿ ಓಡಿ ಬರುತ್ತಿರುವುದನ್ನು ನೋಡಿ ನಮ್ಮ ಸಿಬ್ಬಂದಿಯವರು ಹಿಡಿದುಕೊಂಡಿರುತ್ತಾರೆ. ನಂತರ ಆತನನ್ನು ವಿಚಾರಿಸಲಾಗಿ ಆತನು ತನ್ನ ಹೆಸರು, ವಿಳಾಸವನ್ನು ತಿಳಿಸಿ ತೋಟದಲ್ಲಿ ಇದ್ದ ಮಾಂಸವನ್ನು ಹೊಂಡದಲ್ಲಿ ಮುಚ್ಚಿಟ್ಟಿರುವುದಾಗಿ ತಿಳಿಸಿ, ನಮ್ಮನ್ನು ಹಾಗೂ ಪಂಚರನ್ನು ಮಾಂಸವನ್ನು ಮುಚ್ಚಿಟ್ಟ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಮಾಂಸದ ತುಂಡುಗಳನ್ನು ಚೆಲ್ಲಾ-ಪಿಲ್ಲಿಯಾಗಿ ಬಿದ್ದಿದವು. ಹಾಗೂ ಪಕ್ಕದಲ್ಲಿ ಸ್ಟೀಲ್ ಡಬ್ಬಿ ಬಿದ್ದಿರುವುದು ಕಂಡು ಬಂದಿರುತ್ತದೆ. ಅದನ್ನು ತೆರೆದು ನೋಡಲಾಗಿ ಸುಳ್ಳು ಮಾಂಸ ಇರುವುದು ಕಂಡು ಬಂದಿರುತ್ತದೆ. ಸುಟ್ಟ ಮಾಸಂ ಹಾಗೂ ಚೆಲ್ಲಾ ಪಿಲ್ಲಿಯಾಗಿ ಬಿದ್ದಿದ್ದ ಮಾಂಸವನ್ನು ಸ್ಟೀಲ್ ಡಬ್ಬಿ ಸಮೇತ ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡು, ಅವುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಗಳಲ್ಲಿ ಹಾಕಿ ಅರಗು ಸೀಲ್ ಹಾಕಿರುತ್ತೇವೆ. ನಂತರ ಪ್ರಕರಣದಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ ಎಂದು ಆತನನ್ನು ವಿಚಾರಿಸಲಾಗಿ, ಆತನು ತನ್ನ

ಜೊತೆ 3 ನೇ ಆರೋಪಿ ಭಾಗವಹಿಸಿದ್ದು, ಅವನು ತನ್ನ ಮನೆಯಲ್ಲಿ ಅಡಗಿ ಕುಳಿತಿದ್ದಾಗಿ ತಿಳಿಸಿರುತ್ತಾನೆ. ನಂತರ ಆತನ ಮನೆಗೆ ಹೋಗಿ ಆತನನ್ನು ವಶಕ್ಕೆ ಪಡದುಕೊಂಡಿರುತ್ತೇವೆ.

2. ನಂತರ ವಶಕ್ಕೆ ಪಡಿಸಿಕೊಂಡ ಎಲ್ಲಾ ಆರೋಪಿಗಳನ್ನು ವಲಯ ಅರಣ್ಯಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಹೋಗಿ ಹಾಜರುಪಡಿಸಿರುತ್ತೇವೆ. ನಂತರ ದಸ್ತಗಿರಿ ಮಾಡಿದ 2 ಮತ್ತು 3 ನೇ ಆರೋಪಿತರನ್ನು ವಿಚಾರಣೆ ವಾಡಲಾಗಿ ತಾವುಗಳು ನಾವು ಯಾವುದೇ ಪ್ರಾಣಿಗಳನ್ನು ಹತ್ಯೆ ಮೂಡಿರುವುದಿಲ್ಲ ನಮ್ಮ ಬಳಿ 5 ನೇ ಆರೋಪಿ ಬಂದು 1 ನೇ ಆರೋಪಿಯು ತನ್ನ ತೋಟದಲ್ಲಿ ಕಾಡು ಕೋಣವನ್ನು ಭೇಟೆಯಾಡಿದ್ದು, ಅದರ ಮಾಂಸವನ್ನು ತರಲು 6 ನೇ ಆರೋಪಿ ಮನೆಗೆ ಹೋಗಿ, ಅವರಿಗೆ ವಿಷಯವನ್ನು ತಿಳಿಸಿ ಆತನ ವಾಹನ ಸಂಖ್ಯೆಃ ಕೆಎ-30-ಎಮ್-331 ಮಾರುತಿ 800 ವಾಹನದಲ್ಲಿ 4 ನೇ ಆರೋಪಿಯನ್ನು ಕರೆದುಕೊಂಡು, ಹನೋರ್ಲಿ ಗ್ರಾಮದ ಕ್ರಾಸಗೆ ಹೋಗಿ ಅಲ್ಲಿ ವಾಹನವನ್ನು ನಿಲ್ಲಿಸಿ ಅಲ್ಲಿಂದ 1 ಕಿ. ಮೀಟರ್ ಕಾಲ್ನಡೆಗೆಯಿಂದ 1 ನೇ ಆರೋಪಿಯು ಮನೆಗೆ ಹೋಗಿ, 1 ನೇ ಆರೋಪಿಯು ತಾನು ಭೇಟೆಯಾಡಿದ ಕಾಡು ಕೋಣವನ್ನು ತೋರಿಸಿ ಅದರ ಮಾಂಸವನ್ನು ಸಿಮೆಂಟ್ ಚೀಲದಲ್ಲಿ ತುಂಬಿಕೊಂಡು ಕಾರಿನ ಡಿಕ್ಕಿ ಹಾಗೂ ಮಧ್ಯಭಾಗದಲ್ಲಿ ಇಟ್ಟುಕೊಂಡು, ತಮ್ಮ-ತಮ್ಮ ಪಾಲಿಗೆ ಬಂದ ಮಾಂಸವನ್ನು ತೆಗೆದುಕೊಂಡಿರುತ್ತೇವೆ ಎಂದು ತಿಳಿಸಿರುತ್ತಾರೆ.

3. ನಂತರ ನಾವು ಹಾಗೂ ಪಂಚರು ಸೇರಿಕೊಂಡು 6 ನೇ ಆರೋಪಿಯು ಮನೆಗೆ ಹೋಗಿರುತ್ತೇವೆ. ಅವರಿಗೆ ವಿಚಾರವನ್ನು ತಿಳಿಸಿದಾಗ 6 ನೇ ಆರೋಪಿ ಮನೆಯಲ್ಲಿ ಇಲ್ಲದಿರವುದನ್ನು ಅವರ ಪತ್ನಿ ತಿಳಿಸಿರುತ್ತಾರೆ. ಹಾಗೂ ವಾಹನ ಬೀಗವನ್ನು ಕೇಳಲಾಗಿ ಅದು ಕೂಡ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ನಮ್ಮ ಜೀಪ ಬೀಗದ ಕೈಯನ್ನು ತೆಗೆದು ನೋಡಿದಾಗ ಅದರಲ್ಲಿ ಪ್ರಾಣಿಯ ಕೂದಲು ಹಾಗೂ ಚರ್ಮದ ತುಂಡುಗಳು

ಇರುವುದು ಕಂಡು ಬಂದಿರುತ್ತದೆ. ನಂತರ ಅವುಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡಿಸಿಕೊಂಡಿರುತ್ತೇವೆ. ನಂತರ ನಾವು ವಾಹನದ ಜೊತೆಗೆ ವಾಹನದಲ್ಲಿದ್ದ ಸ್ಟೇಪಣಿ, ಜ್ಯಾಗ್ ಲೀವರ್, ವೀಲ್ ಪಾನ್, ನೆಟ್ ಬೋಟ ಹಾಗೂ ಸೌಂಡ್ ಬಾಕ್ಸಗಳನ್ನು ಜಪ್ತು ಪಡಿಸಿಕೊಂಡಿರುತ್ತೇವೆ. ಹಾಗೂ ವಾನದಲ್ಲಿದ್ದ ಪ್ರಾಣಿಯ ಕೂದಲು ಹಾಗೂ ಚರ್ಮವನ್ನು ವಶಪಡಿಸಿಕೊಂಡಿರುತ್ತೇವೆ. ನಂತರ ಅಲ್ಲಿಂದ ಹರ್ನೊಲಿ ಗ್ರಾಮದ 1 ನೇ ಆರೋಪಿ ಮನೆಗೆ ಹೋಗಿ, ಅಲ್ಲಿ ಪ್ರಕರಣದ ವಿಷಯವನ್ನು ತಿಳಿಸಲಾಗಿ, ಆತನು ಕೃತ್ಯ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ. ನಂತರ ಆತನನ್ನು ವಶಕ್ಕೆ ಪಡೆದುಕೊಂಡು, ವಲಯ ಕಚೇರಿಗೆ ತಂದಿರುತ್ತೇವೆ.

4. ನಂತರ ಸಂಜೆ 6-30 ಗಂಟೆಯಿಂದ ರಾತ್ರಿ 10-00 ಗಂಟೆಯವರೆಗೆ ಪಂಚನಾಮೆಯನ್ನು ತಯಾರಿಸಿರುತ್ತೇವೆ. ನನಗೆ ಈಗ ತೋರಿಸಿದ ಪಂಚನಾಮೆಯಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ 1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಂಸರ ಮರದಿನ ನಾವು, ಪಂಚರು ಹಾಗೂ 2 ನೇ ಆರೋಪಿನೊಂದಿಗೆ, 1 ನೇ ಆರೋಪಿಯ ಮನೆಗೆ ಹೋಗಿ, ಆತನು ತೋರಿಸಿ ಕೊಟ್ಟ ಕಾಡು ಕೋಣ ಬೇಟೆಯಾಡಿದ ಜಾಗವನ್ನು ಪರಿಶೀಲನೆ ಮಾಡಿರುತ್ತೇವೆ. ಅಲ್ಲಿಯೇ ಸಮೀಪದಲ್ಲಿ ಕಾಡುಕೋಣವನ್ನು ಹೂತ ಹಾಕಿದ ಸ್ಥಳವನ್ನು ತೋರಿಸಿದ್ದು, ಅದನ್ನು ಅಗೆದು ನೋಡಲಾಗಿ ಕಾಡು ಕೋಣದ ಕಾಲುಗಳು ಹಾಗೂ ಸ್ವಲ್ಪ ದೇಹದ ಭಾಗ ಇರುವುದು ಕಂಡು ಬಂದಿರುತ್ತದೆ. ನಂತರ ಉಳಿದ ಭಾಗದ ಬಗ್ಗೆ ವಿಚಾರಿಸಿದಾಗ ಅಲ್ಲಿ 15 -20 ಮೀಟರ ದೂರದಲ್ಲಿ ಇನ್ನೊಂದು ಹೂತಿಟ್ಟ ಜಾಗವನ್ನು ತೋರಿಸಿದ್ದು, ಅದನ್ನು ಅಗೆದು ನೋಡಲಾಗಿ ಅದರಲ್ಲಿ ಕಾಡುಕೋಣದ ಹೊಟ್ಟೆ ಭಾಗ, ಚರ್ಮ, ಹಾಗೂ ಉಳಿದ ಮಾಂಸ ಇರುವುದು ಕಂಡು ಬಂದಿರುತ್ತದೆ. ನಂತರ 2 ನೇ ಆರೋಪಿಯನ್ನು ಕಾಡುಕೋಣದ

ತೆಲೆಯ ಬಗ್ಗೆ ವಿಚಾರಸಿದಾಗ, 2 ನೇ ಆರೋಪಿಯು ಸದ್ರಿ ತಲೆಯು 1 ನೇ ಆರೋಪಿಗೆ ಬೇಕಾಗಿದ್ದರಿಂದ, ಅಲ್ಲೆ ಪೊದೆಗಳ ಮಧ್ಯೆ ಹೂತು ಹಾಕಿರುವುದಾಗಿ ತಿಳಿಸಿ ಆ ಜಾಗವನ್ನು ತೋರಿಸಿರುತ್ತಾರೆ. ಸದ್ರಿ ಜಾಗದಲ್ಲಿ ತಲೆಯನ್ನು ಪರಿಶೀಲನೆ ಮಾಡಿ, ಕೊಂಬಿನ ಅಳತೆಯನ್ನು ಮಾಡಿರುತ್ತಾರೆ. ಹಾಗೂ ಕಾಡುಕೋಣವನ್ನು ಬೇಯಿಸಲು ಉಪಯೋಗಿಸಿದ ತಂತಿಯನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ.

5. ನಂತರ ಕಾಡುಕೋಣದ ಮಾಂಸವನ್ನು ಮಾದರಿಗಾಗಿ ತೆಗೆದು, ಸ್ಟೀಲ್ ಡಬ್ಬಿಯಲ್ಲಿ ಹಾಕಿ ಸೀಲ್ ಮಾಡಿರುತ್ತೇವೆ. ನಂತರ ಕಾಡುಕೋಣದ ದೇಹವನ್ನು ಅಲ್ಲಿಯೇ ಹೊಂಡದಲ್ಲಿ ಹೂತು ಹಾಕಿರುತ್ತೇವೆ. ನಂತರ ವಲಯ ಅರಣ್ಯ ಕಚೇರಿಗೆ ಬಂದು, ಬೆಳಿಗ್ಗೆ 8-00 ರಿಂದ 9-30 ರ ವರಗೆ ಪಂಚನಾವೆಯನ್ನು ಜರುಗಿಸಿರುತ್ತೇವೆ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ, ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ 2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು.

6. ನಂತರ 1 ರಂದ 3ನೇ ಆರೋಪಿತರನ್ನು ಮಾನ್ಯ ಶಿರಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಂತರ ನ್ಯಾಯಾಧೀಶರ ಆದೇಶದಂತೆ 1 ರಿಂದ 3 ಜನ ಆರೋಪಿತರನ್ನು ಧಾರವಾಡ ಕೇಂದ್ರ ಕಾರಗೃಹಕ್ಕೆ ಹಸ್ತಾಂತರ ಮಾಡಿರುತ್ತೇವೆ. ನಂತರ ವಿಭಾಗ ಕಚೇರಿಗೆ ಆಗಮಿಸಿ ಮಾನ್ಯ ನ್ಯಾಯೊಲಯದ ಆದೇಶದಂತೆ ಕಾಡುಕೋಣದ ಮಾಂಸ, ತಲೆ, ಕೊದಲು, ಚರ್ಮ ಎಲ್ಲಾ ಸೇರಿಸಿ ಮದ್ಯಾಹ್ನ 12-15 ರಿಂದ 02-25 ರ ವರೆಗೆ ಸುಟ್ಟು ಹಾಕಿ ಪಂಚನಾಮೆ ಮಾಡಿರುತ್ತೇವೆ. ಆ ಬಗ್ಗೆ ಸ್ಥಳದಲ್ಲಿ ಪೋಟೊಗಳನ್ನು ತೆಗೆದಿರುತ್ತೇವೆ. ಸದ್ರಿ ಪಂಚನಾಮೆಯಲ್ಲಿ ನನ್ನ ಸಹಿಯನ್ನು ನೋಡಿ ಗುರುತಿಸಿದ್ದು,

ಅದನ್ನು ಈಗ ನಿಪಿ 3 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ನನಗೆ ಈಗ ತೋರಿಸಿದ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 4 ರಿಂದ 31 ಎಂದು ಗುರುತಿಸಲಾಯಿತು. ಅವುಗಳಿಗೆ ಸಂಬಂಧಿಸಿದ ನೆಗಟಿವ್‌ವನ್ನು ನಿಪಿ 32 ಎಂದು ಗುರುತಿಸಲಾಯಿತು. 1 ರಿಂದ 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ. ಮಾನ್ಯ ನ್ಯಾಯಾಲಯದ ಮುಂದೆ 2 ನೇ ಆರೋಪಿತರು ಹಾಜರಿರುತ್ತಾರೆ.

ಪಾಟೀ ಸವಾಲುಃ ಶ್ರೀ. ಎಸ್.ಕೆ.ಎಸ್ ವಕೀಲರಿಂದಃ

(ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.